96

<u>ಕರ್ನಾಟಕ ಸರ್ಕಾರದ ನಡವಳಿಗಳು</u>

ವಿಷಯ: Institute for Social and Economic Change, Bengaluru, ಇವರು ದಿನಾಂಕ: 5.2.2015 ಮತ್ತು 6.2.2015ರಂದು ಆಯೋಜಿಸಿರುವ "Natural Resource and National Accounting in South Asia" ಅಂತರ ರಾಷ್ಟ್ರೀಯ ಸಮ್ಮೇಳನಕ್ಕೆ ಆರ್ಥಿಕ ಸಹಾಯವನ್ನು ಒದಗಿಸುವ ಬಗ್ಗೆ.

ಓದಲಾಗಿದೆ: Institute for Social and Economic Change, Bengaluru, ಇವರ ಪತ್ರ ದಿನಾಂಕ: 19.12.2014 ಮತ್ತು 28.4.2015.

ಪ್ರಸ್ತಾವನೆ:

Institute for Social and Economic Change, Bengaluru ಇವರು ದಿನಾಂಕ: 5.2.2015 ಮತ್ತು 6.2.2015ರಂದು "Natural Resource and National Accounting in South Asia" ಕುರಿತಂತೆ ರಾಜ್ಯ ಯೋಜನಾ ಮಂಡಳಿಯ ಸಹಯೋಗದೊಂದಿಗೆ ಅಂದಾಜು ರೂ.10.00 ಲಕ್ಷಗಳ ವೆಚ್ಚದಲ್ಲಿ ಸಮ್ಮೇಳನವನ್ನು ನಡೆಸಿದ್ದು, ಈ ಸಮ್ಮೇಳನಕ್ಕೆ ರಾಜ್ಯ ಯೋಜನಾ ಮಂಡಳಿಯಿಂದ ರೂ.3,00,000/-ಗಳ ಆರ್ಥಿಕ ನೆರವನ್ನು ನೀಡುವಂತೆ ಮೇಲೆ ಓದಲಾದ ಪತ್ರದಲ್ಲಿ ISEC, Bengaluru, ಇವರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

<u>ಸರ್ಕಾರದ ಆದೇಶ ಸಂಖ್ಯೆ: ಪಿಡಿ 40 ಎಸ್‌ಪಿಬಿ 2014, ಬೆಂಗಳೂರು, ದಿನಾಂಕ: 12.05.2015.</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, Institute for Social and Economic Change, Bengaluru ಇವರು ದಿನಾಂಕ: 5.2.2015 ಮತ್ತು 6.2.2015ರಂದು "Natural Resource and National Accounting in South Asia" ಕುರಿತಂತೆ ರಾಜ್ಯ ಯೋಜನಾ ಮಂಡಳಿಯ ಸಹಯೋಗದೊಂದಿಗೆ ನಡೆಸಲಾಗಿರುವ ಸಮ್ಮೇಳನಕ್ಕೆ ರೂ.3.00 ಲಕ್ಷಗಳ (ಮೂರು ಲಕ್ಷ ರೂಪಾಯಿಗಳು ಮಾತ್ರ) ಅನುದಾನವನ್ನು ವೆಚ್ಚದ ವಿವರ ಹಾಗೂ ಬಳಕೆ ಪ್ರಮಾಣ ಪತ್ರವನ್ನು ನೀಡುವ ಷರತ್ತಿಗೆ ಒಳಪಟ್ಟು ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

2. ಈ ವೆಚ್ಚವನ್ನು 2015-16ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ "3451-00-101-4-00 (051) (ಯೋಜನೇತರ) – ಇತರೆ ವೆಚ್ಚಗಳಡಿಯಲ್ಲಿ ಭರಿಸತಕ್ಕದ್ದು.

.......2

95



3. ಸರ್ಕಾರದ ಅಧೀನ ಕಾರ್ಯದರ್ಶಿ(ಎಸ್-3), ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಇವರು ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಹಾಗೂ ಮೇಲು ರುಜು ಮಾಡುವ ಅಧಿಕಾರಿಯಾಗಿರುತ್ತಾರೆ.

4. ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಪಿಡಿ 113 ಎಸ್‌ಪಿಎಂ 96, ದಿನಾಂಕ: 17.05.1997ರಲ್ಲಿ ರಾಜ್ಯ ಯೋಜನಾ ಮಂಡಳಿಯ ಕಾರ್ಯದರ್ಶಿಯವರಿಗೆ ನೀಡಲಾದ ಅಧಿಕಾರ ಪ್ರತ್ಯಾಯೋಜನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಲಲಿತ)
ಸರ್ಕಾರದ ಅಧೀನ ಕಾರ್ಯದರ್ಶಿಗಳು (ಎಸ್-3)
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ರಾಜ್ಯ ಯೋಜನಾ ಮಂಡಳಿಯ ಉಪಾಧ್ಯಕ್ಷರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ.
3. ನಿರ್ದೇಶಕರು, ಐಸೆಕ್, ಡಾ: ವಿ.ಕೆ.ಆರ್.ವಿ. ರಾವ್ ರಸ್ತೆ, ನಾಗರಬಾವಿ ಪೋಸ್ಟ್, ಬೆಂಗಳೂರು – 560 072.
4. ಕಾರ್ಯದರ್ಶಿಗಳು, ರಾಜ್ಯ ಯೋಜನಾ ಮಂಡಳಿ.
5. ಕಾರ್ಯದರ್ಶಿಗಳು, ಕನ್ನಡ ಅಭಿವೃದ್ಧಿ ಪ್ರಾಧಿಕಾರ.
6. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ – 5).
7. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಯೋಜನಾ ಇಲಾಖೆ (1 ಮತ್ತು 2) ಇವರಿಗೆ – ಕಂಪೆಂಡಿಯಂಗಾಗಿ ಒಂದು ಪ್ರತಿ
9. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.